# ಕೇಶವ ಮಳಗಿ



ಚಿತ್ರ: ಅಜಿತ್ ಸ್ಯಾಮುಯೆಲ್

ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ– ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ...

ಕನ್ನಡದ ಪ್ರಮುಖ ಕಥೆಗಾರ ಕೇಶವ ಮಳಗಿ ಬಳ್ಳಾರಿ ಜಿಲ್ಲೆಯವರು. 80ರ ದಶಕದಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿದ ಮಳಗಿ ತಮ್ಮದೇ ಆದ ವಿಶಿಷ್ಟ ನುಡಿಗಟ್ಟು, ಶೈಲಿ, ದನಿ ಬನಿಯ ಕತೆಗಳಿಂದ ಕನ್ನಡ ಓದುಗರಿಗೆ ಪರಿಚಿತರು. ಜನಸಾಮಾನ್ಯರು ಬದುಕನ್ನು ಘನತೆ, ಪ್ರೀತಿಯಿಂದ ಜೀವಿಸುವ ರೀತಿಯನ್ನು ಅವರ ಕತೆಗಳು ದಟ್ಟವಾಗಿ ಚಿತ್ರಿಸುತ್ತವೆ. ತುಂಬ ಆಪ್ತವಾಗಿ, ಕಥನದ ಅಸಲು ಕಸುಬಿಗೆ ಬದ್ಧರಾಗಿ ಬರೆಯುವ ಕತೆಗಾರ ಮಳಗಿ.

'ಕಡಲ ತೆರೆಗೆ ದಂಡೆ', 'ಮಾಗಿ ಮೂವತ್ತೈದು', 'ವೆನ್ನೆಲ ದೊರಸಾನಿ', 'ಹೊಳೆ ಬದಿಯ ಬೆಳಗು' ಅವರ ಕಥಾಸಂಕಲನಗಳಾದರೆ, 'ಕುಂಕುಮ ಭೂಮಿ', 'ಅಂಗಧ ಧರೆ' ಅವರ ಕಾದಂಬರಿಗಳು. 'ನೇರಳೆ ಮರ' ರೂಪಕ ಲೋಕದ ಕಥನಗಳನ್ನು ನಿರೂಪಿಸುವ ಕೃತಿ. ಮಳಗಿ ಅನುವಾದಗಳನ್ನೂ ಮಾಡಿದ್ದಾರೆ. 'ಬೋರಿಸ್ ಪಾಸ್ತರ್‌ನಾಕ್: ವಾಚಿಕೆ', 'ನೀಲಿ ಕಡಲ ಹಕ್ಕಿ' (ಕತೆಗಳು), 'ಮದನೋತ್ಸವ' (ಕಾದಂಬರಿ), 'ಸಂಕಥನ' (ಫ್ರೆಂಚ್ ಸಾಹಿತ್ಯ, ಸಮಾಜ, ಸಂಸ್ಕೃತಿ, ಸಾಹಿತ್ಯ ವಿಮರ್ಶೆ), 'ಕಡಲಾಚೆಯ ಚೆಲುವೆ' (ಫ್ರೆಂಚ್ ಕಥೆಗಳು) ಸೇರಿದಂತೆ ಹಲವು ಅನುವಾದಿತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಮಳಗಿ, ಸೃಷ್ಟಿ ಇನ್ಸ್‌ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿಯಲ್ಲಿ ಬೋಧಕರಾಗಿದ್ದಾರೆ.